ಅಥವಾ ಮರಾಠಿ ಭಾಷೆಯನ್ನು ಮಾತನಾಡುವವರಿಗೆ ಶಾಲೆಗಳನ್ನು ತೆರಯಬೇಕೆಂದು ಪ್ರಾರ್ಥಿಸುತ್ತೇನೆ. ಈಗಾಗಲೇ ಶಿಕ್ಷಣ ಇಲಾಖೆಯ ಬೇಡಿಕೆಯ ಮೇಲೆ ಮಾತನಾಡುವಾಗ ಸೂಪಾದಲ್ಲಿ ೨-೩ ಮರಾಠಿ ಶಾಲೆಗಳಲ್ಲಿ ಶಿಕ್ಷಕರು ಇಲ್ಲದೆ ಮುಚ್ಚಿದ್ದಾರೆಂದು ಹೇಳಿದ್ದೇನೆ. ಅಲ್ಲಿಗೆ ಶಿಕ್ಷಕರನ್ನು ಹಾಕುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಈ ಗಡಿ ಸಮಸ್ಯೆ ಬಗ್ಗೆ ಮಹಾಜನ್ ವರದಿಯು ನಿರ್ಣಯ ಅಂತಿಮವಾದುದು ಎನ್ನುವುದನ್ನು ಎಲ್ಲರೂ ಒಪ್ಪಿದ್ದಾರೆ. ಆದರೆ ನಮ್ಮ ಮುಖ್ಯಮಂತ್ರಿಗಳು ಮೇಲಿಂದ ಮೇಲೆ ಇದರ ಬಗ್ಗೆ ಚರ್ಚೆ ಮಾಡುವುದರಿಂದ ಗಡಿ ಭಾಗದಲ್ಲಿರತಕ್ಕ ಜನರಲ್ಲಿ ಒಂದು ತರಹದ ಪ್ರಚೋದನೆ ಉಂಟಾಗುತ್ತದೆ. ಅವರು ತಮ್ಮ ರಾಜಕೀಯ ಉದ್ದೇಶ ಸಾಧನೆಗಾಗಿ ಈ ರೀತಿ ಚರ್ಚೆ ಮಾಡುತ್ತಾರೆ ಎನ್ನುವ ಭಾವನೆ ಬಂದಿದೆ. ವಿಶೇಷವಾಗಿ ಕಾರವಾರ ಮತ್ತು ಸೂಪಾ ಬಗ್ಗೆ, ಜನತಾ ಸರ್ಕಾರ ಕರ್ನಾಟಕದಲ್ಲಿ ಆಳ್ವಿಕೆಗೆ ಬಂದನಂತರ ಅಲ್ಲಿ.....

ಅಧ್ಯಕ್ಷರು.—ನೇರವಾದ ಪ್ರಶ್ನೆ ಕೇಳಿ.

ಶ್ರೀ ಪಿ.ಎಸ್. ರಾಣೆ.—ಜನತಾ ಸರ್ಕಾರದ ನೀತಿಯಿಂದ ಗಡಿ ಸಮಸ್ಯೆ ಮತ್ತೆ ಹೆಚ್ಚು ಕೆದಕುತ್ತದೆ. ಇದರ ಬಗ್ಗೆ ಸ್ಪಷ್ಟವಾದ ನಿಲುವನ್ನು ಸರ್ಕಾರ ಹೇಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಏನು ಸ್ಪಷ್ಟವಾಗಿ ಹೇಳಬೇಕೋ ನನಗೆ ಗೊತ್ತಿಲ್ಲ. ಶ್ರೀಪಾನ್ ರಾಣೆಯವರಿಗೆ ಇಷ್ಟು ಮಾತ್ರ ಹೇಳುತ್ತೇನೆ. ಮಹಾರಾಷ್ಟ್ರ ಏಕೀಕರಣ ಸಮಿತಿಯಿಂದ ಮೊದಲು ಎಷ್ಟು ಸಂಖ್ಯೆ ಆರಿಸಿ ಬರುತ್ತಿದ್ದರೋ ಈಗ ಅಷ್ಟು ಸಂಖ್ಯೆಯಲ್ಲಿ ಸದಸ್ಯರು ಸದನಕ್ಕೆ ಬರುತ್ತಿಲ್ಲ. ಇದು ಒಂದು. ಈಗ ಕಾರವಾರ ಅಪರ ಸ್ವಂತ ಮತದಾನ ಕ್ಷೇತ್ರ. ಅನೇಕ ಸಲ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಆರಿಸಿ ಬಂದಿದ್ದರು. ಈಗ ಎರಡು ಸಲ ಇವರು ಆರಿಸಿ ಬಂದಿದ್ದಾರೆ. ಬಾಗೇವಾಡಿ ಕ್ಷೇತ್ರದಲ್ಲಿ ಪ್ರತಿ ಸಲ ೨-೩ ಜನ ಕನ್ನಡಿಗರು ನಿಲ್ಲುತ್ತಾರೆ. ಆಗ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಆರಿಸಿ ಬಂದಿದ್ದರು. ಆದರೆ ಈ ಸಲ ಕನ್ನಡಿಗರು ಆರಿಸಿ ಬಂದಿದ್ದಾರೆ. ಬೆಳಗಾಂ ಲೋಕಸಭಾ ಚುನಾವಣೆಯಲ್ಲಿ, ಬೆಳಗಾಂ ಸಿಟಿ ಕ್ಷೇತ್ರದಲ್ಲಿ ಕನ್ನಡ ಅಭ್ಯರ್ಥಿಗೆ ಬಹುಮತ ಸಿಕ್ಕಿದೆ. ಇದೆಲ್ಲಾ ಏನು ತೋರಿಸುತ್ತದೆ. ಸಾಮಾನ್ಯ ಜನರಿಗೆ ಇದು ಬೇಕಾಗಿಲ್ಲ, ಆದರೆ ಇವರಿಗೆ ಬೇಕು. ಅಭಿರುಚಿ ಇವರಿಗೆ ಬೇಕು. ತಮ್ಮ ದೈನಂದಿನ ಸಮಸ್ಯೆಗೆ ಪರಿಹಾರಕ್ಕೆ ಕೆಲವು ಜನ ಇದರಲ್ಲಿ ಆಸಕ್ತಿ ಹೊಂದಿದ್ದಾರೆ. ಇದಕ್ಕೆ ನಾವು ಏನೂ ಮಾಡುವುದಕ್ಕೆ ಬರುವುದಿಲ್ಲ

ದಕ್ಷಿಣ ಕನ್ನಡ ಜಿಲ್ಲೆಯಂ ಶಿರ್ವಾದ ಆರಕ್ಷಕ ಠಾಣಾಧಿಕಾರಿಯಂವರ ವರ್ಗಾವಣೆ

೨೯೫ (೭೫೧) ಶ್ರೀ ವಸಂತ ವಿ. ಸಾಲಿಯಾನ್ (ಕಾಪು).—ಈ ಕೆಳಕಂಡ ಪ್ರಶ್ನೆಗೆ ಮಾನ್ಯ ಗೃಹ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ :—

ತಾ. ೨-೬-೮೫ ರಿಂದ ೨೮-೬-೮೫ರವರೆಗೆ ದಕ್ಷಿಣ ಕನ್ನಡ ಜಿಲ್ಲೆ ಶಿರ್ವಾ ಆರಕ್ಷಕ ಠಾಣಾಧಿಕಾರಿಯವರನ್ನು ಎಷ್ಟು ಬಾರಿ ವರ್ಗಾವಣೆ ಮಾಡಲಾಯಿತು ಮತ್ತು ಎಷ್ಟು ಬಾರಿ ವರ್ಗಾವಣೆ ರದ್ದು ಪಡಿಸಲಾಯಿತು ಹಾಗೂ ಆ ರೀತಿಯ ವರ್ಗಾವಣೆಗೆ ಕಾರಣವೇನು ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).

ಆರಕ್ಷಕ ಉಪ ನಿರೀಕ್ಷಕ ಶ್ರೀ ಎಸ್. ಜಿ. ಮರಿಯಪ್ಪನವರನ್ನು ಶಿರ್ವಾ ಪೋಲೀಸ್ ಠಾಣೆಯಿಂದ ಚಿಕ್ಕಮಗಳೂರು ಜಿಲ್ಲೆಗೆ ದಿನಾಂಕ ೮-೬-೮೫ರಂದು ಪಶ್ಚಿಮ ವಲಯದ ಆರಕ್ಷಕ ಉಪ ಮಹಾ ನಿರೀಕ್ಷಕರು ವರ್ಗಾವಣೆ ಮಾಡಿರುತ್ತಾರೆ. ಈಗ ಅವರು ಚಿಕ್ಕಮಗಳೂರು ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರ ವರ್ಗಾವಣೆಗೆ ಸಾರ್ವಜನಿಕ ಹಿತ ದೃಷ್ಟಿಯೇ ಕಾರಣ.

ಶ್ರೀ ವಸಂತ ವಿ. ಸಾಲಿಯಾನ.—ಮಾನ್ಯ ಅಧ್ಯಕ್ಷರೇ, ಈ ಅವಧಿಯಲ್ಲಿ ಎಷ್ಟು ಬಾರಿ ಟ್ರಾನ್ಸ್‌ಫರ್ ಆಗಿದೆ, ಎಷ್ಟು ಬಾರಿ ಟ್ರಾನ್ಸ್‌ಫರ್ ರದ್ದತಿ ಆಗಿದೆ ಎಂದು ಕೇಳಿದ್ದೇನೆ. ಅದಕ್ಕೆ ಮಂತ್ರಿಯವರು ಈ ರೀತಿ ಉತ್ತರ ಕೊಟ್ಟಿದ್ದಾರೆ, ೮-೬-೮೫ನೇ ದಿವಸ ಟ್ರಾನ್ಸ್‌ಫರ್ ಆಗಿದೆ ಈಗ ಅವರು ಚಿಕ್ಕಮಗಳೂರಿಗೆ ಹೋಗಿದ್ದಾರೆ ಎಂದು ಹೇಳಿದ್ದಾರೆ. ಆದರೆ ಮಂತ್ರಿಗಳಿಗೆ ಈ ಎರಡು

ಕಾಗದ ಕೊಟ್ಟಿದ್ದೇನೆ. ಒಂದನೆಯ ಕಾಗದ, ೧೬ನೇ ತಾರೀಖು ಎಲ್ಲಾ ಪಕ್ಷದವರು, ಅಂದರೆ ಜನತಾ ಪಕ್ಷ, ಬಿ.ಜೆ.ಪಿ., ಕಾಂಗ್ರೆಸ್ (ಐ) ಪಕ್ಷ ಹಾಗೂ ಸಾರ್ವಜನಿಕರ ಬೆಂಬಲ ತೆಗೆದುಕೊಂಡು, ಸನ್ಮಾನ್ಯ ಮಂತ್ರಿಯವರಿಗೆ ಅರ್ಜಿ ಕೊಟ್ಟಿದ್ದೇವೆ.

ನಂತರ ೧೫ನೇ ತಾರೀಖಿನ ದಿವಸ ನಾನು ಇನ್ನೊಂದು ಕಾಗದವನ್ನು ಮಾನ್ಯ ಮಂತ್ರಿಗಳಿಗೆ ಬರೆದಾಗ ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಚರ್ಚೆ ಮಾಡಿ ರೀಟೈನ್ ಮಾಡಿಸುತ್ತೇನೆಂದು ಕಾಗದ ಬರೆದಿದ್ದಾರೆ. ಅವರು ೮ನೇ ತಾರೀಕಿನ ದಿವಸ ಅವರನ್ನು ಟ್ರಾನ್ಸ್‌ಫರ್ ಮಾಡಿದ್ದೇವೆ ಎಂದು ಹೇಳುತ್ತಾರೆ. ೧೫ನೇ ತಾರೀಕಿನ ಪತ್ರದಲ್ಲಿ ಅವರನ್ನು ರೀಟೈನ್ ಮಾಡುತ್ತೇವೆಂದು ಪತ್ರ ಬರೆದಿದ್ದಾರೆ. ಇದರಲ್ಲಿ ಮಾನ್ಯ ಮುಖ್ಯಮಂತ್ರಿಗಳ ರಾಜಕೀಯದಿಂದ ಏನಾದರೂ ಅವರನ್ನು ಟ್ರಾನ್ಸ್‌ಫರ್ ಮಾಡಿದ್ದೀರಾ ? ಇವರು ಒಬ್ಬ ದಕ್ಷ ಆಡಳಿತಗಾರರು, ಅವರು ಎಷ್ಟೋ ಕಳ್ಳತನ ಪ್ರಕರಣವನ್ನು ಪತ್ತೆ ಹಿಡಿದಿದ್ದಾರೆ. ಇದನ್ನು ತಿಳಿದೂ ತಿಳಿದೂ ಟ್ರಾನ್ಸ್‌ಫರ್ ಮಾಡಿರುವುದರಿಂದ ಅವರನ್ನು ಏನಾಕಾರಣ ಟ್ರಾನ್ಸ್‌ಫರ್ ಮಾಡಿದ್ದಾರೆ ಎಂದು ಹೇಳಬೇಕಾಗುತ್ತದೆ.

ಅಧ್ಯಕ್ಷರು.—ಇದು ಚರ್ಚೆ ಮಾಡತಕ್ಕಂಥಾದ್ದಲ್ಲ. ಸಪ್ಲಿಮೆಂಟರಿ ಏನಾದರೂ ಇದ್ದರೆ ಕೇಳಿ.

ಶ್ರೀ ವಸಂತ ವಿ. ಸಾಲಿಯಾನ.—ಮಾನ್ಯ ಮಂತ್ರಿಗಳು ಅವರನ್ನು ೮-೬-೮೫ರಂದು ಟ್ರಾನ್ಸ್‌ಫರ್ ಮಾಡಿದ್ದಾರೆ, ಅದು ನಿಜ. ಆದರೆ ಅನಂತರವೂ ಅವರನ್ನು ರೀಟೈನ್ ಮಾಡುತ್ತೇವೆಂದು ಕಾಗದ ಬರೆದಿದ್ದರೂ ಕೂಡ ಟ್ರಾನ್ಸ್‌ಫರ್ ಮಾಡಿದ್ದಾರಲ್ಲಾ ಅದುತಿಳಿದೋ ಅಥವಾ ತಿಳಿಯದೋ ಮಾಡಿರಬಹುದು. ಆದರೆ ಆದರ ಬಗ್ಗೆ ನನಗೆ ಸ್ಪಷ್ಟೀಕರಣಬೇಕು.

ಶ್ರೀ ಬಿ. ರಾಚಯ್ಯ.—ಪಶ್ಚಿಮ ವಲಯದ ಡಿ.ಐ.ಜಿ. ಅವರನ್ನು ವರ್ಗ ಮಾಡಿದ್ದಾರಲ್ಲಾ ಏತಕ್ಕೆಂದರೆ ನಾವು ಅವರಿಗೆ ಪವರ್ಸ್ ಅನ್ನು ಡೆಲಿಗೇಟ್ ಮಾಡಿದ್ದರಿಂದ ಮಾಡಿದ್ದಾರೆ. ಅನಂತರ ಈ ವಿಷಯ ನನ್ನ ಗಮನಕ್ಕೆ ಬಂದಾಗ ಅವರನ್ನು ವರ್ಗ ಮಾಡಬೇಕಾದರೆ ಸರ್ಕಾರದ ಅನುಮತಿ ಇಲ್ಲದೆ, ಸರ್ಕಾರವನ್ನು ಕೇಳದೆ ಮಾಡಕೂಡದು ಎಂದುಹೇಳಿದೆ. ಅನಂತರ ಅವರು ಮಾನ್ಯ ಮುಖ್ಯಮಂತ್ರಿಗಳ ಅನುಮತಿಯನ್ನು ಪಡೆದುಕೊಂಡಮೇಲೆ ಆ ಆರ್ಡರ್‌ನ್ನು ಜಾರಿಗೆ ಕೊಟ್ಟಿದ್ದಾರೆ.

ಶ್ರೀ ವಸಂತ ವಿ. ಸಾಲಿಯಾನ.—ಅವರನ್ನು ಟ್ರಾನ್ಸ್‌ಫರ್ ಏತಕ್ಕೆ ಮಾಡಿದ್ದು ಅಂತ ನಾನು ಕೇಳಿದ್ದಕ್ಕೆ ಸಾರ್ವಜನಿಕ ಹಿತದೃಷ್ಟಿಯಿಂದ ಮಾಡಿದ್ದೇನೆಂದು ಹೇಳಿದರು ಸಾರ್ವಜನಿಕ ಹಿತದೃಷ್ಟಿಯಿಂದಲೇ ಎಲ್ಲಾ ಪಕ್ಷದವರೂ ಸೇರಿ ೧೫ನೇ ತಾರೀಕು ಅವರನ್ನು ಆಲ್ಲೆ ರೀಟೈನ್ ಮಾಡಬೇಕು ಎಂದು ಕಾಗದ ಬರೆದಿದ್ದೇವೆ. ಆದರೂ ಸಹ ಮತ್ತೆ ಎರಡನೇ ಬಾರಿಗೆ ಅವರನ್ನು ಏನು ಟ್ರಾನ್ಸ್‌ಫರ್ ಮಾಡಿದರು ಅದರ ಬಗ್ಗೆ ನನ್ನಲ್ಲಿ ದಾಖಲಾತಿಗಳು ಇವೆ. ಎಲ್ಲಾ ಪಕ್ಷದವರೂ ಸೇರಿ ಅವರನ್ನು ರೀಟೈನ್ ಮಾಡಿಕೊಡಬೇಕು ಎಂದು ಕೇಳಿದ್ದಕ್ಕೆ ಬೆಲೆಯೇ ಇಲ್ಲದಂತಾಗಿದೆ. ನಾವು ಈ ಬಗ್ಗೆ ೧೫ನೇ ತಾರೀಕು ಬರೆದ ಪತ್ರಕ್ಕೆ ಬೆಲೆ ಏನು ಇದೆ ಅನ್ನುವುದನ್ನು ಹೇಳುತ್ತೀರಾ ?

ಅಧ್ಯಕ್ಷರು.—ಕೊಶ್ಚನ್ ಮೇಲೆ ಈ ರೀತಿಯಾಗಿ ಡಿಸ್ಕಸ್ ಮಾಡುವುದು ಸರಿಯಲ್ಲ. ಏನಾದರೂ ಸಪ್ಲಿಮೆಂಟರಿ ಇದ್ದರೆ ಕೇಳಿ. ಪ್ರಶ್ನೋತ್ತರ ವೇಳೆ ೧೨ಕ್ಕೆ ಮುಗಿಯಬೇಕಾಗಿತ್ತು. ನಿಮಗೆ ಅವಕಾಶ ಕೊಡುವುದಕೋಸ್ಕರ ೧೦ ನಿಮಿಷ ಜಾಸ್ತಿ ಮಾಡಿದೆ. ಸಪ್ಲಿಮೆಂಟರಿ ಕೇಳಿ, ಇಲ್ಲದೇಹೋದರೆ ನಾನು ಮುಂದಿನ ಪ್ರಶ್ನೆಯವರನ್ನು ಕರೆಯಬೇಕಾಗುತ್ತದೆ.

ಶ್ರೀ ವಸಂತ ವಿ. ಸಾಲಿಯಾನ.—೮ನೇ ತಾರೀಕು ಮೊದಲನೇ ಬಾರಿ ಅವರನ್ನು ಟ್ರಾನ್ಸ್‌ಫರ್ ಮಾಡಿದ್ದನ್ನು ನಾನು ಒಪ್ಪುತ್ತೇನೆ. ಆದರೆ ೨ನೇ ಬಾರಿ ದಕ್ಷಿಣ ಕನ್ನಡ ಜಿಲ್ಲೆಯ ೧೩ ಜನ ಶಾಸಕರೂ ಸಹ ಒಂದು ರೆಪ್ರೆಸೆಂಟೇಷನ್ ಬರೆದು ಕೊಟ್ಟು ಅವರನ್ನು ಅಲ್ಲೇ ರೀಟೈನ್ ಮಾಡಬೇಕು ಎಂದು ಹೇಳಿದ್ದಕ್ಕೆ ಪರಿಶೀಲಿಸುತ್ತೇವೆಂದು ಹೇಳಿದ ನಂತರವೂ ಟ್ರಾನ್ಸ್‌ಫರ್ ಮಾಡಿದ್ದೀರಿ ಅಂದ ಮೇಲೆ ನಮಗೆ ಬೆಲೆ ಏನು ಬಂದ ಹಾಗಾಯಿತು ?

ಶ್ರೀ ಬಿ. ರಾಚಯ್ಯ.—೮ನೇ ತಾರೀಕು ಅವರನ್ನು ಟ್ರಾನ್ಸ್‌ಫರ್ ಮಾಡಿದ್ದರು. ಆಮೇಲೆ ಅವರನ್ನು ರೀಟೈನ್ ಮಾಡಬೇಕು ಎಂದು ನೀವು ಕಾಗದ ಬರೆದಾಗ ಅದಕ್ಕೆ ನಾವು ಅಕ್ನಾಲೆಡ್ಜ್‌ಮೆಂಟ್ ಅನ್ನು, ಹಾಕಿ ಉತ್ತರವನ್ನು ಕೊಟ್ಟಿದ್ದೇವೆ.

ಶ್ರೀ ವಸಂತ ವಿ. ಸಾಲಿಯಾನ.—ನನ್ನ ಪ್ರಶ್ನೆಗೆ ಸಮಂಜಸವಾದ ಉತ್ತರ ಬರಲಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಪ್ರಶ್ನೋತ್ತರ ಕಾಲದಲ್ಲಿ ಒಬ್ಬ ಅಧಿಕಾರಿಯ ಟ್ರಾನ್ಸ್‌ಫರ್ ಬಗ್ಗೆ ಇಷ್ಟು ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶವನ್ನು ತೆಗೆದುಕೊಳ್ಳತಕ್ಕಂಥಾದ್ದು ಸರಿಯಾದುದಲ್ಲ.

ಶ್ರೀ ಪ್ರತಾಪಚಂದ್ರಶೆಟ್ಟಿ.—ಇದೇನು ರಾಜಕೀಯ ಮಾಡುತ್ತಾರೇನು ?

ಶ್ರೀ ಎ. ಲಕ್ಷ್ಮೀಸಾಗರ್.—ಇದರಲ್ಲಿ ರಾಜಕೀಯ ಪ್ರಶ್ನೆ ಏನೂ ಇಲ್ಲ. ಪಾಲಿಸಿ ಡಿಸ್ಕಷನ್ ಬಗ್ಗೆ ಪ್ರಸ್ತಾಪ ಮಾಡಿದರೆ ಅದಕ್ಕೆ ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತದೆಯೆ ? ಒಬ್ಬ ಅಧಿಕಾರಿಯನ್ನು ಟ್ರಾನ್ಸ್‌ಫರ್ ಮಾಡಿರುವ ಬಗ್ಗೆ ಈ ರೀತಿಯಾಗಿ ವಿಧಾನಸಭೆಯಲ್ಲಿ ಡಿಸ್ಕಷನ್ ಮಾಡತಕ್ಕಂಥಾದ್ದು ಸರಿಯಾದುದಲ್ಲ.

ಶ್ರೀ ಪ್ರತಾಪಚಂದ್ರಶೆಟ್ಟಿ.—ಇದರಲ್ಲಿ ಒಬೊಬ್ಬರದೂ ಕೂಡ ಏನಾದರೂ ಅಂಡರ್ ಡೀಲಿಂಗ್ಸ್ ಇದೆಯೇನು ?

ಶ್ರೀ ಎ. ಲಕ್ಷ್ಮೀಸಾಗರ್.—ಅಂಡರ್ ಡೀಲಿಂಗ್ಸ್ ವಿಚಾರ ಆಮೇಲೆ ಗೊತ್ತಾಗುತ್ತದೆ.

ಶ್ರೀ ಬಿ. ರಾಚಯ್ಯ.—ಮೊದಲು ಅವರಿಗೆ ಪಪರ್ ಡೆಲಿಗೇಟ್ ಮಾಡಿದ್ದರು, ಅದರಿಂದ ಅವರು ಟ್ರಾನ್ಸ್‌ಫರ್ ಮಾಡಿದರು. ಆನಂತರ ಮಾನ್ಯ ಸದಸ್ಯರು ಅದನ್ನು ಕ್ಯಾನ್ಸಲ್ ಮಾಡಬೇಕು ಎಂದು ನನಗೆ ಕಾಗದ ಬರೆದಿದ್ದರು. ಅದಕ್ಕೆ ನಾನು ಉತ್ತರವನ್ನು ಕೊಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಂಸದೀಯ ವ್ಯವಹಾರ ಮಂತ್ರಿಗಳು ಪ್ರಶ್ನೋತ್ತರದ ಬಗ್ಗೆ ಇಂಡಿವಿಜ್ಯೂಯಲ್ ಆಗಿರುವವರ ಮೇಲೆ ಅಂದರೆ ಒಬ್ಬ ಅಧಿಕಾರಿಯ ಮೇಲೆ ಇಷ್ಟೊಂದು ಪ್ರಶ್ನೆಗಳನ್ನು ಕೇಳತಕ್ಕಂಥಾದ್ದು ಸರಿಯಾದುದಲ್ಲ ಎಂದು ಹೇಳಿದರು. ಇದು ಅವರ ಅಭಿಪ್ರಾಯ. ರೂಲ್ಸ್ ಪ್ರಕಾರ ಮಾನ್ಯ ಸದಸ್ಯರು ಪ್ರಶ್ನೆಗಳನ್ನು ಕೇಳಬಾರದು ಅಂತ ಏನೂ ಇಲ್ಲ ಮಾನ್ಯ ಸದಸ್ಯರು ಕೇಳುವ ಹಕ್ಕು ಇದೆ. ಅವರು ಕೇಳುತ್ತಾರೆ.

ಶ್ರೀ ಎಂ. ರಘುಪತಿ.—ಒಬ್ಬ ಇಂಡಿವಿಜ್ಯೂಲ್ ಬಗ್ಗೆ ಇಷ್ಟೊಂದು ಪ್ರಶ್ನೆಗಳನ್ನು ಕೇಳುತ್ತಿದ್ದಾರಲ್ಲಾ ಅದಕ್ಕೆ ಹೇಳಿದ್ದು.

ಶ್ರೀ ಎಸ್. ಬಂಗಾರಪ್ಪ.—ಅವರು ಇಂಡಿವಿಜ್ಯೂಲ್ ಆಗಿಯೇ ಈ ಒಬ್ಬ ಅಧಿಕಾರಿಯನ್ನು ಇಲ್ಲೇ ರಿಟೈನ್ ಮಾಡಿಕೊಡಬೇಕು ಎಂದು ಎತಕ್ಕೆ ಇಷ್ಟು ಪ್ರಶ್ನೆಗಳನ್ನು ಕೇಳುತ್ತಿದ್ದಾರೆಂದರೆ ಮೊದಲನೇ ಬಾರಿ ೮-೬-೮೫ರಂದು ಅವರನ್ನು ವರ್ಗಾವಣೆ ಮಾಡಿದಿರಿ. ಎರಡನೇ ಬಾರಿಯೂ ಸಹ ಅವರನ್ನು ರಿಟೈನ್ ಮಾಡಬೇಕೆಂದು ಕೇಳಿಕೊಂಡಿದ್ದರೂ ಸಹ ಅವರನ್ನು ವರ್ಗಾವಣೆ ಮಾಡಿದಿರಿ. ಈಗ ತಾವೇನು ಒಂದು ಆರ್ಡರ್ ಅನ್ನು ಹೊರಡಿಸಿದ್ದೀರಿ. ಇಂತಿಂಥ ನಿಯಮಗಳಿಗೆ ಅನುಸಾರವಾಗಿ ಟಿ.ಎ.ಕೊಡುವುದಿಲ್ಲ, ಡಿ.ಎ.ಕೊಡುವುದಿಲ್ಲ ಎಂದು. ಅವರಿಗೆ ಟಿ.ಎ, ಡಿ.ಎ.ಕೊಡದೇ ಹೋದರೆ ಅವರ ಗತಿ ಏನು ? ಇಂಥ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಕೊಡದೇ ಹೋದರೆ ನಾವು ಏತಕ್ಕೆ ಇಲ್ಲಿ ಕೂತುಕೊಳ್ಳಬೇಕು ?

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಹೇಳಿದ್ದು ಒಬ್ಬ ಇಂಡಿವಿಜ್ಯೂಯಲ್ ಆಫೀಸರ್ ಮೇಲೆ ಇಷ್ಟೊಂದು ಪ್ರಶ್ನೆಗಳನ್ನು ಈ ವಿಧಾನಸಭೆಯಲ್ಲಿ ಹಾಕಿ ಚರ್ಚೆ ಮಾಡತಕ್ಕಂಥ ವಿಷಯವಲ್ಲ ಎಂದು ನನ್ನ ಅಭಿಪ್ರಾಯ. ಯಾವುದಾದರೂ ಪಾಲಿಸಿ ವಿಷಯದ ಬಗ್ಗೆ ಟ್ರಾನ್ಸ್‌ಫರ್ ಆದರೆ, ಅಥವಾ ಒಂದು ಇಲಾಖೆಗೆ ಸಂಬಂಧಪಟ್ಟಂತೆ ಟ್ರಾನ್ಸ್‌ಫರ್ ವಿಷಯ ಆದರೆ ಅದರ ಬಗ್ಗೆ ಹೆಚ್ಚು ವಿಷಯಗಳನ್ನು ಕೇಳಿ ತಿಳಿದು ಕೊಳ್ಳುವುದು ಸರಿ. ಅದು ಬಿಟ್ಟು ಒಬ್ಬ ಇಂಡಿವಿಜ್ಯೂಯಲ್ ಆಫೀಸರ್ ಮೇಲೆ ಈ ಟ್ರಾನ್ಸ್‌ಫರ್ ವಿಷಯವಾಗಿ ಈ ಸಭೆಯಲ್ಲಿ ಇಷ್ಟೊಂದು ಚರ್ಚೆ ಮಾಡುವುದು ಸರಿಯಾದುದಲ್ಲ ಎಂದು ನನ್ನ ಅಭಿಪ್ರಾಯ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ಕೇಳುವಂಥಾದ್ದು ಅವರನ್ನು ಇಷ್ಟು ಸಾರಿ ವರ್ಗಾವಣೆ ಮಾಡುವುದಕ್ಕೆ ಕಾರಣ ಏನು ಎಂದು ?

ಶ್ರೀ ಬಿ. ರಾಚಯ್ಯ.—ಅವರನ್ನು ವರ್ಗ ಮಾಡಿರುವುದು ಒಂದೇ ಸಾರಿ.

ಶ್ರೀ ಎಸ್. ಬಂಗಾರಪ್ಪ.—ಶ್ರೀ ಮಾನ್ ರಾಚಯ್ಯನವರಿಂದ ಅವರಿಗೆ I have asked the Hom Secretary to retain his services at shirva ಎಂದು ೧೫-೬-೩೫ ರ ಕಾಗದಕ್ಕೆ ಉತ್ತರ ಬರೆದಿದ್ದಾರೆ. ಮಾನ್ಯ ಸದಸ್ಯರು ಸರಳವಾಗಿಯೇ ಪ್ರಶ್ನೆಯನ್ನು ಕೇಳಿದ್ದಾರೆ. ಇದು ಒಂದು ಸಣ್ಣ ಪ್ರಶ್ನೆ. ಇದಕ್ಕೆ ಸರಳವಾಗಿಯೇ ಉತ್ತರ ಕೊಡುವುದನ್ನು ಬಿಟ್ಟು ಬೇರೆ ಏನೋ ಹೇಳಿದರೆ ಹೇಗೆ ?

ಶ್ರೀ ಹೆಚ್. ಟಿ. ಕೃಷ್ಣಪ್ಪ. ಮಾನ್ಯ ಸದಸ್ಯರು ಸರಳವಾಗಿಯೇ ಪ್ರಶ್ನೆ ಕೇಳಿದ್ದರೆ ಸರಳವಾಗಿಯೇ ಉತ್ತರ ಕೊಡುತ್ತಾರೆ. ಅವರು ಕೇಳಿದ ಪ್ರಶ್ನೆ ಸರಳವಾಗಿತ್ತೇ ?

ಅಧ್ಯಕ್ಷರು.—ಇನ್ನು ಇದರ ಮೇಲೆ ಹೆಚ್ಚು ಡಿಸ್ಕಷನ್ ಮಾಡುವುದು ಬೇಡ. ಮುಂದಿನ ಪ್ರಶ್ನೆಗೆ ಹೋಗೋಣ.

ಬೆಳ್ತಂಗಡಿಯಲ್ಲಿ ೩೦ ಹಾಸಿಗೆಯುಳ್ಳ ಆಸ್ಪತ್ರೆಯನ್ನು ನಿರ್ಮಿಸುವುದು

೩೦೦(೩೮೭) ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಆರೋಗ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(ಅ) ಬೆಳ್ತಂಗಡಿ ಪ್ರಾಥಮಿಕ ಆರೋಗ್ಯ ಕೇಂದ್ರದಡಿಯಲ್ಲಿ ೩೦ ಹಾಸಿಗೆಯ ಆಸ್ಪತ್ರೆಗೆ ಸರಕಾರದವರು ಮಂಜೂರಾತಿ ನೀಡಿದ್ದು ಕಟ್ಟಡದ ಕೆಲಸ ಪ್ರಾರಂಭವಾಗದಿರಲು ಕಾರಣಗಳೇನು ? ಮತ್ತು ಯಾವಾಗ ಪ್ರಾರಂಭ ಮಾಡ ಬಹುದು ?

(ಆ) ಮೇಲ್ಕಂಡ ಆರೋಗ್ಯ ಕೇಂದ್ರದಲ್ಲಿ ಬಡಪರಿಗೆ ಸರಿಯಾಗಿ ಚಿಕಿತ್ಸೆಯನ್ನು ನೀಡದಿರುವುದು, ಔಷಧಿಯನ್ನು ಕೊಡದಿರುವುದು ಮತ್ತು ಸದರಿ ಕೇಂದ್ರದಲ್ಲಿರುವ ಕ್ಷ-ಕಿರಣ ಯಂತ್ರವನ್ನು ದುರಸ್ತಿ ಮಾಡದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದೇ ?

ಡಾ॥ ಹೆಚ್. ಎಲ್. ತಿಮ್ಮೇಗೌಡ.—(ಆರೋಗ್ಯ ಮಂತ್ರಿಗಳು)

(ಅ) ಆಡಳಿತಾತ್ಮಕ ಮಂಜೂರಾತಿ ನೀಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. ಮಂಜೂರಾತಿ ನೀಡಿದ ನಂತರ ಕಟ್ಟಡದ ಕೆಲಸವನ್ನು ಪ್ರಾರಂಭಿಸಲಾಗುವುದು.

(ಆ) ಇಲ್ಲ.

ಸಾಮಾನ್ಯವಾಗಿ ಉಪಯೋಗವಾಗುವ ಔಷಧಿಯನ್ನು ಪ್ರತಿ ದಿನ ಕೊಡಲಾಗುತ್ತಿದೆ.

ಕ್ಷ-ಕಿರಣಯಂತ್ರ ಕೆಲಸ ನಿರ್ವಹಿಸುತ್ತಿದೆ.

ಶ್ರೀ ಕೆ. ವಸಂತ ಬಂಗೇರ.—ಮಾನ್ಯ ಅಧ್ಯಕ್ಷರೆ, "ಅ" ಪ್ರಶ್ನೆಗೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಉತ್ತರ ಕೊಟ್ಟಿದ್ದಾರೆ. ಇದು ಸರ್ಕಾರದ ಪರಿಶೀಲನೆಯಲ್ಲಿ ಸುಮಾರು ಎರಡು ವರ್ಷಗಳಿಂದ ಇದೆ. ಇನ್ನೂ ಪರಿಶೀಲನೆ ಮಾಡಲಿಕ್ಕೆ ಸರ್ಕಾರಕ್ಕೆ ಎಷ್ಟು ವರ್ಷ ಬೇಕು ಎನ್ನುವುದು ಒಂದು ಪ್ರಶ್ನೆ. ಇಲ್ಲವೇ ನಿಗದಿತವಾಗಿ ಇನ್ನೆಷ್ಟು ದಿನಗಳಲ್ಲಿ ಈ ಪರಿಶೀಲನೆ ಮುಗಿದು ಮಂಜೂರಾತಿ ಕೊಡುತ್ತೇವೆ ಎನ್ನುವಂಥ ವಿಚಾರವನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು. ಅಲ್ಲಿ ಸಾಮಾನ್ಯವಾಗಿ ಉಪಯೋಗಿಸುವ ಔಷಧಿಗಳನ್ನೂ ಕೊಡುತ್ತಾ ಇಲ್ಲ. ಅಲ್ಲಿಗೆ ಬಂದಂಥ ರೋಗಿಗಳಲ್ಲಿ ಶೇಕಡ ೯೦ ಜನರಿಗೆ ಚೀಟಿ ಬರೆದು ಕೊಟ್ಟು ಕಳುಹಿಸುತ್ತಾರೆ. ಔಷಧಿ ಕೊಡುತ್ತಾ ಇಲ್ಲ. ಉತ್ತರದಲ್ಲಿ ಸಾಮಾನ್ಯವಾಗಿ ಉಪಯೋಗವಾಗುವ ಔಷಧಿಗಳನ್ನು ಪ್ರತಿದಿನ ಕೊಡಲಾಗುತ್ತಿದೆ ಎಂದು ಹೇಳಿದ್ದಾರೆ ಆದರೆ ಅಲ್ಲಿ ಕೊಡುತ್ತಾ ಇಲ್ಲ. ನಂತರ "ಕ್ಷ" ಕಿರಣ ಯಂತ್ರ ಕೆಲಸ ಮಾಡುತ್ತಾ ಇಲ್ಲ. ಅಲ್ಲಿಗೆ ಡೈರೆಕ್ಟರವರು ಭೇಟಿ ನೀಡಿದಾಗ ಇದನ್ನು ನೋಡಿದ್ದಾರೆ. ಈ ವಿಚಾರ ಅವರಿಗೆ ಗೊತ್ತಿದೆ. ಇನ್ನು ಮುಂದೆ ವೈದ್ಯರಿಗೆ ಸೂಕ್ತ ಸಲಹೆ ನೀಡಿ ಕೆಲಸ ಮಾಡಲಿಕ್ಕೆ ಆದೇಶ ಕೊಡುತ್ತಿರಾ ?

ಡಾ॥ ಹೆಚ್. ಎಲ್. ತಿಮ್ಮೇಗೌಡ.—ಮಾನ್ಯ ಸದಸ್ಯರು ಪರಿಶೀಲನೆಗೆ ಎಷ್ಟು ವರ್ಷ ಬೇಕು ಎಂದು ಕೇಳಿದ್ದಾರೆ ಮಾನ್ಯ ಸದಸ್ಯರು ನೋಡಿರಬಹುದು, ಬಜೆಟ್‌ನಲ್ಲಿ ೭ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಇಲ್ಲದೆ ಮಾಡುವುದಕ್ಕಾಗುವುದಿಲ್ಲ. ಬಜೆಟ್